ಮುಕ್ತಗೊಳಿಸುತ್ತಾನೆ. ಅವನು ರೋಮಿನಲ್ಲಿ ಪ್ರಸಿದ್ಧ ನಾಟಕಕಾರನಾಗುತ್ತಾನೆ. ಕ್ರಿ.ಪೂ. 154ರಲ್ಲಿ ಬರೆದ ಅವನ ಆರು ನಾಟಕಗಳು, ಈ ವಾಕ್ಯ ನಮ್ಮವರೆಗೆ ಉಳಿದುಬಂದಿದೆ. ಬಿಳಿಯನಾಗಿ ಹುಟ್ಟದ, ಸ್ವತಂತ್ರವಾಗಿರದ ವ್ಯಕ್ತಿ, ಯಾವುದೇ ರಾಜ್ಯದ ನಾಗರಿಕತ್ವ ಪಡೆಯಲು ಸಾಧ್ಯವಿರದ ವ್ಯಕ್ತಿ 'ನಾನು ಮನುಷ್ಯ. ಮನುಷ್ಯರಿಗೆ ಸಂಬಂಧಿಸಿದ್ದು ಯಾವುದೂ ನನಗೆ ಪರಕೀಯವಲ್ಲ' ಎಂದು ಹೇಳುತ್ತಾನೆ. ನನಗೆ ಇದರಲ್ಲಿ ನಂಬಿಕೆಯಿದೆ. ಇದನ್ನು ಹನ್ನೆರಡು ಹದಿಮೂರು ವಯಸ್ಸಿನಲ್ಲಿರುವಾಗಲೇ ನನ್ನೊಳಗೆ ಆಳವಾಗಿ ಬೇರೂರಿಸಿಕೊಂಡೆ. ನಾನೊಮ್ಮೆ ಮನಸ್ಸು ಮಾಡಿದರೆ ಆಯ್ತು. ನನ್ನ ಪುಸ್ತಕ ಪ್ರಕಟವಾಗದಿದ್ದರೆ ಅದ್ಭುತವಾದ ಸಂಗೀತ ಸೃಷ್ಟಿಸುತ್ತಿದ್ದೆ ಇಲ್ಲವೆ ಉತ್ತಮ ಗೆಳತಿಯಾಗಿರುತ್ತಿದ್ದೆ. ಹೌದು ಏನಾದರೂ ಅದ್ಭುತವಾದದ್ದನ್ನೇ ಮಾಡುತ್ತಿದ್ದೆ. ನನ್ನ ನೆರೆಹೊರೆಯವರಿಗೆ, ನನ್ನ ಸ್ನೇಹಿತರಿಗೆ, ನನ್ನ ಪ್ರೇಮಿಗೆ ಯಾರಿಗಾದರೂ ನನ್ನಿಂದ ಸಾಧ್ಯವಾಗುವ ಅದ್ಭುತವಾದದ್ದನ್ನೇ ನೀಡುತ್ತಿದ್ದೆ. ಜಗತ್ತು ನಾನು ಯಶಸ್ವಿಯಾದೆ ಎಂದು ಹೇಳುವುದರ ಬಗ್ಗೆ ನಾನೆಂದೂ ತಲೆಕೆಡಿಸಿಕೊಂಡಿಲ್ಲ. ನನಗದರ ಅವಶ್ಯಕತೆಯೂ ಇಲ್ಲ.

◆ **ನೀವು ಧೈರ್ಯವನ್ನು ಉಲ್ಲೇಖಿಸಿದಿರಿ...**

...ಬಹಳ ಮುಖ್ಯವಾದ ಗುಣ. ಈ ಗುಣವಿಲ್ಲದೆ ನೀವು ಬೇರೆ ಯಾವ ಗುಣವನ್ನೂ ಬೆಳೆಸಿಕೊಳ್ಳಲು ಸಾಧ್ಯವಿಲ್ಲ.

◆ **ಬಿಳಿಯ ಬರಹಗಾರರು ಬರೆದ ಕರಿಯರ ಅನುಭವದ ಬಗ್ಗೆ ಏನು ಹೇಳುವಿರಿ? ಫಾಕ್ನರ್ ಅವರ The Sound and the Fury ಅಥವಾ ವಿಲಿಯಂ ಸ್ಟೈರಾನ್ಸ್ ಅವರ Confessions of Nat Turner ಬಗ್ಗೆ ನಿಮ್ಮ ಅಭಿಪ್ರಾಯ.**

ಬಹಳಷ್ಟು ಸಲ ನಿರಾಶೆಯಾಗಿದೆ. ಅದು ಅನ್ಯಾಯ. ಲೇಖಕ ಅಥವಾ ಲೇಖಕಿ ತಾನು ನೋಡುತ್ತಿರುವುದರ ಕುರಿತು ಸುಳ್ಳು ಹೇಳುತ್ತಿದ್ದಾರೆ ಅಂತ ಹೇಳುತ್ತಿಲ್ಲ. ಅವರು ಆಳವಾಗಿ, ಗಮನವಿಟ್ಟು ನೋಡಿಲ್ಲ ಅಂತ ನಿರಾಶೆಯಾಗಿದೆ. ಪೀಟರ್ ಒ ಟೂಲ್ ಅಥವಾ ಮೈಕೆಲ್ ಕೇನ್



**ವಜ್ರವಾಗಲು ಹೆಚ್ಚು ಸಮಯ, ಒತ್ತಡ ಎರಡನ್ನೂ ತಡೆದುಕೊಳ್ಳಬೇಕು. ಅದಕ್ಕಿಂತ ಕಡಿಮೆ ಸಮಯವಾದರೆ ಸ್ಫಟಿಕವಾಗುವಿರಿ. ಅದಕ್ಕಿಂತಲೂ ಕಡಿಮೆ ಸಮಯವಾದರೆ ಇದ್ದಿಲು. ಅದಕ್ಕಿಂತ ಕಡಿಮೆ ಸಮಯವಾದರೆ ಕೊಳೆತ ಎಲೆ. ಅದಕ್ಕಿಂತಲೂ ಕಡಿಮೆ ಸಮಯವಾದರೆ ಬರಿ ಕಸ.**